# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | (85) 130 |
| ವಿಧಾನ ಪರಿಷತ್ತು ಸದಸ್ಯರ ಹೆಸರು | : | ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 08.12.2025 |
| ಉತ್ತರಿಸಬೇಕಾದವರು | : | ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು |

********

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಪರಿಸರಕ್ಕೆ ಮಾರಕವಾಗಿರುವ ಏಕ ಬಳಕೆಯ ಪ್ಲಾಸ್ಟಿಕ್‌ನ್ನು ನಿಷೇಧಿಸಿದ್ದರೂ ಸಹ ನಿಯಮಬಾಹಿರವಾಗಿ ನಿರಂತರವಾಗಿ ಪ್ಲಾಸ್ಟಿಕ್ ಬಳಕೆ ಮುಂದುವರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು |
| (ಆ) | ಬಂದಿದ್ದಲ್ಲಿ, ಏಕ ಬಳಕೆಯ ಪ್ಲಾಸ್ಟಿಕ್ ಉತ್ಪಾದನೆ ಮಾಡುತ್ತಿರುವವರ ವಿರುದ್ಧ ಕೈಗೊಂಡ ಕ್ರಮಗಳೇನು: | ಕರ್ನಾಟಕ ರಾಜ್ಯದಲ್ಲಿ ಕೆಲ ಪ್ಲಾಸ್ಟಿಕ್ ವಸ್ತುಗಳ ಬಳಕೆಯನ್ನು ನಿಷೇಧಿಸಿ ಸರ್ಕಾರವು ದಿನಾಂಕ: 11.03.2016 ರಂದು ಅಧಿಸೂಚನೆ ಹೊರಡಿಸಿದೆ. ಈ ಅಧಿಸೂಚನೆಯನ್ವಯ ಪ್ಲಾಸ್ಟಿಕ್ ಉತ್ಪನ್ನಗಳಾದ ಕ್ಯಾರಿಬ್ಯಾಗ್, ಪ್ಲಾಸ್ಟಿಕ್ ಭಿತ್ತಿಪತ್ರ, ಪ್ಲಾಸ್ಟಿಕ್ ತೋರಣ, ಫ್ಲೆಕ್ಸ್, ಪ್ಲಾಸ್ಟಿಕ್ ಬಾವುಟ, ಪ್ಲಾಸ್ಟಿಕ್ ತಟ್ಟೆ, ಪ್ಲಾಸ್ಟಿಕ್ ಲೋಟ, ಪ್ಲಾಸ್ಟಿಕ್ ಚಮಚ, ಕ್ಲಿಂಗ್ ಫಿಲ್ಮ್ ಮತ್ತು ಊಟದ ಮೇಜಿನ ಮೇಲೆ ಹರಡುವ ಪ್ಲಾಸ್ಟಿಕ್ ಹಾಳೆ ಹಾಗೂ ಥರ್ಮೋಕೋಲ್ ಮತ್ತು ಪ್ಲಾಸ್ಟಿಕ್ ಮೈಕ್ರೋ ಬೀಡ್ಸ್‌ನಿಂದ ತಯಾರಾದಂತಹ ಮೇಲ್ಕಂಡ ವಸ್ತುಗಳ ತಯಾರಿಕೆ, ಸರಬರಾಜು, ಸಂಗ್ರಹಣೆ, ಸಾಗಾಣಿಕೆ, ಮಾರಾಟ ಮತ್ತು ವಿತರಣೆ ಮಾಡುವುದನ್ನು ರಾಜ್ಯಾದ್ಯಂತ ನಿಷೇಧಿಸಿದೆ.<br><br>ಮುಂದುವರೆದಂತೆ, ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, (MoEF ಮತ್ತು CC) ನವದೆಹಲಿ, "ಪಾಲಿಸ್ಟೈರೀನ್ ಮತ್ತು ವಿಸ್ತರಿತ ಪಾಲಿಸ್ಟೈರೀನ್ ಸೇರಿದಂತೆ ಏಕ ಬಳಕೆಯ ಪ್ಲಾಸ್ಟಿಕ್ (SUP) ತಯಾರಿಕೆ, ಆಮದು, ಸಂಗ್ರಹಣೆ, ವಿತರಣೆ, ಮಾರಾಟ ಮತ್ತು ಬಳಕೆಯನ್ನು ಜುಲೈ 1, 2022 ರಿಂದ ಜಾರಿಗೆ ಬರುವಂತೆ ನಿಷೇಧಿಸಿ ದಿನಾಂಕ 12ನೇ ಆಗಸ್ಟ್, 2021 ರಂದು ಪರಿಸರ |

(ಸಂರಕ್ಷಣಾ) ಕಾಯ್ದೆ, 1986 ರಡಿ ಅಧಿಸೂಚನೆ (G.S.R.No. 571 (E)) ಯನ್ನು ಹೊರಡಿಸಿದೆ.

ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಮಂಡಳಿಯ ಅಧಿಕಾರಿಗಳು, ಸ್ಥಳೀಯ ಸಂಸ್ಥೆಗಳ ಜೊತೆಗೂಡಿ ಮಾಲ್‌ಗಳು, ಬೀದಿ ಬದಿ ವ್ಯಾಪಾರಿಗಳು, ಅಂಗಡಿ –ಮುಂಗಟ್ಟುಗಳು, ಪ್ಲಾಸ್ಟಿಕ್ ಉತ್ಪಾದಕರು, ಬಳಕೆದಾರರ ಘಟಕಗಳನ್ನು ಪರಿವೀಕ್ಷಣೆ ನಡೆಸಿ ನಿಷೇಧಿತ ಏಕ ಬಳಕೆಯ ವಸ್ತುಗಳು ಕಂಡುಬಂದಲ್ಲಿ ಅಂತಹ ವಸ್ತುಗಳನ್ನು ಮುಟ್ಟುಗೋಲು ಹಾಕಿ, ತಪ್ಪಿತಸ್ಥರ ವಿರುದ್ಧ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಸೂಚನೆಯನ್ವಯ ದಂಡವನ್ನು ವಿಧಿಸಲಾಗುತ್ತಿದೆ.

ಸರ್ಕಾರದ ಅಧಿಸೂಚನೆಯ ದಿನಾಂಕ: 11.03.2016 ರ ಪ್ರಕಾರ, ಏಕ ಬಳಕೆಯ ಪ್ಲಾಸ್ಟಿಕ್ (SUP) ನಿಷೇಧದ ಉತ್ಪನ್ನಗಳ ತಯಾರಿಕೆಗೆ ಸಂಬಂಧಿಸಿದಂತೆ ಉಲ್ಲಂಘಿಸುವ ಕೈಗಾರಿಕೆಗಳ ವಿರುದ್ಧ ಮಂಡಳಿಯು ನಿಷೇಧಿತ ಪ್ಲಾಸ್ಟಿಕ್ ವಸ್ತುಗಳನ್ನು ತಯಾರಿಸುವ ಘಟಕಗಳಿಗೆ ಪರಿಸರ (ಸಂರಕ್ಷಣೆ) ಕಾಯಿದೆ, 1986 ರ ಸೆಕ್ಷನ್ 5 ರ ಅಡಿಯಲ್ಲಿ ಮಂಡಳಿಯು ಘಟಕಗಳಿಗೆ ಮುಚ್ಚುವ ಆದೇಶವನ್ನು ನೀಡುತ್ತದೆ.

ಮಂಡಳಿಯು ಪೌರಾಡಳಿತ ನಿರ್ದೇಶನಾಲಯ, ನಗರಾಭಿವೃದ್ಧಿ ಇಲಾಖೆ, ಎಲ್ಲಾ ಜಿಲ್ಲಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಸದರಿ ನಿಷೇಧಿತ ಏಕ ಬಳಕೆ ಪ್ಲಾಸ್ಟಿಕ್ ವಸ್ತುಗಳ ಕುರಿತು ತರಬೇತಿ ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳುತ್ತಿದೆ.

ರಾಜ್ಯದಲ್ಲಿ ಕರ್ನಾಟಕ ಸರ್ಕಾರವು ನಿಷೇಧಿತ ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್‌ಗಳಿಗೆ ಪರ್ಯಾಯವಾಗಿ ಕಾಗದ, ಬಟ್ಟೆ, ಅಡಿಕೆ ಎಲೆ ಇತ್ಯಾದಿಗಳಿಂದ ತಯಾರಿಸಿದ ಉತ್ಪನ್ನಗಳಿಗೂ ಸಹ ಪ್ರೋತ್ಸಾಹಿಸಲು ಅನುಮತಿಯನ್ನು ನೀಡಲಾಗುತ್ತಿದ್ದು, ಪ್ರಸ್ತುತ 33 ಘಟಕಗಳು ಸದರಿ ಪರ್ಯಾಯ ವಸ್ತುಗಳ ಉತ್ಪಾದನೆಯಲ್ಲಿ ತೊಡಗಿಸಿಕೊಂಡಿರುತ್ತವೆ. **(ಪ್ರತಿಯನ್ನು ಅನುಬಂಧ –1ರಲ್ಲಿ ಲಗತ್ತಿಸಲಾಗಿದೆ).**

ಇ) ಎಷ್ಟು ಪರಿವೀಕ್ಷಣೆಗಳನ್ನು ನಡೆಸಲಾಗಿದೆ ಮತ್ತು ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿ ಕಾರ್ಯ ಪ್ರವೃತ್ತವಾಗಿದೆಯೇ?

2024-25 ಹಾಗೂ 2025-26ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪ್ರಾದೇಶಿಕ ಅಧಿಕಾರಿಗಳು, ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ಹಾಗೂ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳೊಂದಿಗೆ ಜಂಟಿಯಾಗಿ ನಡೆಸಿರುವ ಪರಿವೀಕ್ಷಣೆಗಳು, ಜಪ್ತಿ ಮಾಡಿದ ನಿಷೇಧಿತ ಏಕ ಬಳಕೆ ಪ್ಲಾಸ್ಟಿಕ್ ವಸ್ತುಗಳ ಪ್ರಮಾಣ ಮತ್ತು ವಿಧಿಸಿರುವ ದಂಡದ ಮೊತ್ತದ ವಿವರವು ಈ ಕೆಳಕಂಡಂತಿರುತ್ತವೆ.

| **ವರ್ಷ** | **ಒಟ್ಟು ಪರಿವೀಕ್ಷಣೆ** | **ಜಪ್ತಿ ಮಾಡಿದ ನಿಷೇಧಿತ ಏಕ ಬಳಕೆ ಪ್ಲಾಸ್ಟಿಕ್ ವಸ್ತುಗಳ ಪ್ರಮಾಣ (ಮೆಟ್ರಿಕ್ ಟನ್‌ಗಳಲ್ಲಿ)** | **ವಿಧಿಸಿರುವ ದಂಡದ ಮೊತ್ತ ರೂ. ಗಳಲ್ಲಿ** |
|---|---|---|---|
| 2024-25 | 18,111 | 223.09 | 63.78 ಲಕ್ಷ |
| 2025-26 | 15,928 | 180.39 | 94.45 ಲಕ್ಷ |

ಕರ್ನಾಟಕ ಸರ್ಕಾರದ ಆದೇಶದಂತೆ ಈಗಾಗಲೇ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಮೇಲ್ವಿಚಾರಣಾ ಸಮಿತಿಯನ್ನು ರಚಿಸಲಾಗಿರುತ್ತದೆ. ಆ ಸಭೆಯಲ್ಲಿ, ಜಿಲ್ಲಾ ಪರಿಸರ ಅಧಿಕಾರಿಗಳು ಒಬ್ಬ ಸದಸ್ಯರಾಗಿದ್ದು, ನಿಷೇಧಿತ ಏಕ ಬಳಕೆ ಪ್ಲಾಸ್ಟಿಕ್ ವಸ್ತುಗಳ ಮಾರಾಟ ಹಾಗೂ ಬಳಕೆ ನಿರ್ಬಂಧಿಸಿರುವ ಕುರಿತಂತೆ ಹಲವಾರು ಸಭೆಯನ್ನು ನಡೆಸಲಾಗಿರುತ್ತದೆ. ಸಭೆ ನಡೆಸಿದ ವಿವರವು ಈ ಕೆಳಕಂಡಂತಿರುತ್ತದೆ.

| | |
|---|---|
| **2024-25** | 62 |
| **2025-26** | 34 |

ಸಂಖ್ಯೆ: ಅಪಜೀ 135 ಇಎನ್‌ಜಿ 2025

**(ಈಶ್ವರ್ ಬಿ. ಖಂಡ್ರೆ)**
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು

## Annexure-I

**List of ıdustries manufacturing/selling of alternatives to Banned single use plasti c (SUP) items**

| Sl.No. | Name & Address of the Unit | District | Product | Processing capacity |
|---|---|---|---|---|
| 1 | Eco Paper Products, No.83/139/6, Petechennappa Industrial Area, Kamakshipalya, Bangalore-560079 | Bengaluru Urban | Manufacturing of Paper cups | 20 T/M |
| 2 | Mataji Polypack, No. 6, 2nd Main, Petechennappa Industrial Area, Kamakshipalya, Bangalore-560079 | Bengaluru Urban | Food container and paper plates | 10 T/M |
| 3 | Bio-Lutions ECO Tech I Pvt Ltd., Sy.No. 38/2, Mayaganahalli Village, Kasaba Hobli, Ramanagara Tq &Dist | Ramanagara | Disposable tableware, packaging products etc., using agro/crop residues (Areca leaf plates) | 75.0 MT/Month |
| 4 | Deora Papers Pvt Ltd. Plot No.A-10, Printech Park Cluster, Harohalli Industrial Area, I Phase, Kanakapura Taluk, Ramanagara District | Ramanagara | Paper Bags | 1,20,000 Nos/Month |
| 5 | Jallan Polypack India Private Limited, Plot No. 8-C, Attibele Industrial Area, Anekal Taluk, Bangalore Urban District- 562 107 | Sarjapura | Disposable Paper Cups | 500 MT/Month (6000 MT/Annum) |
| 6 | Imperial 1 Site No. 24, Khata 116/24, Thammarasanahalli Village Sulibele Hobli, Hoskote Tq Bengaluru Rural District | Hoskote Bengaluru Rural | Paper bags and Cloth bags | 3.5 lakhs bags/day and 4000 bags/day |
| 7 | Ganesh Enterprises, Plot No. 247/136/139/2, Rampura Village, Hosur Hobli, Gowribidanur Taluk, Chikkaballapur District | Chikkaballapura | 1. Paper Cups - 250 Ml without Lining or Coating - 5 Lakh Nos/Month. 2.Paper Cups - 250 Ml without Lining or Coating - 5 Lakh Nos/Month - | 1- 5 Lakh Nos/Month 2- 5 Lakh Nos/Month - |
| 8 | Bag Factory, No. 10, Sy. No. 131, Machohalli Industrial Area, Magadi Main Road, Bangalore | Dasarahalli Bengaluru Rural | Paper bags | 400000No's |
| 9 | Deimax India, 94/5, SY NO 94/5, Kannahalli, KODIGEHALLI POST, Bangalore-560091 | Dasarahalli Bengaluru Rural | Paper bags | 10T |

| | | | | |
|---|---|---|---|---|
| 10 | A S N Enterprises, No.41, 5th Cross, 8th Main, Duggalamma Layout, Peenya 3rd Phase, Bangalore 560058 | Dasarahalli Bengaluru Rural | Paper Bag | 400000No's |
| 11 | M/s. Subha Shree Cottage Industries, Sy. No. 170/2, Hosahalli(E.J), Sindhanur-Tq, Raichur District | Raichur | Paper Plates | 125 0000.00 Nos/Month |
| 12 | RNS Patil Enterprises, Sy. No. 142, Aarakera Hobli, Nagaradinni, Deodurga Taluk, Raichur District | Raichur | Leaf Plates | 30000.00 No's/Month |
| 13 | Sri. Harsha Enterprises, No. 12-4-16/K, Beside Indian Oil Petrol Pump, Near Gunj Circle, Raichur | Raichur | Paper Cups, Paer Products | 264000 Cups/day |
| 14 | Padur Enterprises, Sy. No. 98/1A4, Paduru Village, Udupi Tq & District | Udupi | Paper Cup | 6000000 Nos/Month |
| 15 | Aneev Industries, Sy. No. 12/10, Halady Village, Kundapura Tq, Udupi District | Udupi | Paper Cup & Fabric Bags | 780000 Nos/Month 520000Nos/Month |
| 16 | Adith Packers, Sy. No. 227/10, D. No. 3-41E, Havanjje, Udupi Tq & District | Udupi | Cotton bag, Paper bag | 100000 Nos/Month 100000 Nos/Month |
| 17 | Prabhu Eco Friendly Prodcuts, Sy. No. 103/11A Kukkundoor Village, Karkala Tq, Udupi District | Udupi | Areca Leaf Plates | 150000 Nos/Month |
| 18 | Shri Vinayak Leaf Cups, Plot NO. D-5, Industrial Estate, Sirsi | Karwar | Leaf Cups | 20000 No's/Month |
| 19 | Shrimat Parijnanashram Handmade Paper Unit, Sy. No. 985/A/1A/B, Shirali, Bhatkal | Karwar | Handmade Paper Products | 18 MT/A |
| 20 | S.K Paper Products Sy No. 146-6p-2P/1, Kuvettu Village Belthandagy | Mangaluru | Coffee Paper Cups & Ice cream Cups | 32,40,000/A 39,96,000/A |
| 21 | Venkateshwara paper Products, Shed No. C-11, Yeyyadi Indl Area, ,Mangalore | Mangaluru | Paper Cups | 5TPM |
| 22 | Shan Enterprises Sy No. 199, Hosangady Perinje Belthangady | Mangaluru | Paper Cups Paper bags Paper plates | 200000 50000 200000 |
| 23 | Bharath Paper Product Door No. 1-312, Megina pet Vittal Bantwal | Mangaluru | Paper Plates | 5000Nos/Day |
| 24 | Divya Spandana Manufacture (p) Ltd, Sy No. 227-1A, Chilthadaka Guthikar Post, Sullia | Mangaluru | Paper Bags , Paper based household materials & Paper Cups | 25TPM 25TPM 10TPM |

| | | | | |
|---|---|---|---|---|
| 25 | R B Paper Bags<br>Kadalkere Indl area<br>Moodbidri | Mangaluru | Paper Carry bags | 1TPM |
| 26 | Ramdev Industries, Anjana Bldg, 1st Floor, Behind LVT Factory Indl Estate 1st Gate Gokul Road Hubli | Dharwad | H M Covers Paper Cups | |
| 27 | Veman Paper Cone Industries, Sy No 69 A/2/1, Gadag Hubli Road, Hulkoti, , Gadag, Gadag - 582205 | Gadag | Paper Cone | |
| 28 | Mahalasa Industries. Plot No: 33, KIADB Narasapu Gadag Dist | Gadag | Paper plates | |
| 29 | Fareed Ahamad Badesab Sunkad, Baba Paper Plates, Plot No: 49/2, Jawala Street azad Road, Gadag, Tq & Dist: Gadag. | Gadag | Paper plates | |
| 30 | PMR Industry, Sy. No: 76/3, Sogival Village, Tq Laxmeshwara, Dist: Gadag. | Gadag | Paper bags | |
| 31 | Origami Cellouse Private Limited, No. S8 and S9, Apparel Park KIADB Industrial Area, Doddaballapura Taluk, Bengaluru Rural Districr-561203 | Doddaballapura Bengaluru Rural | All types Cellulose papers, paper plates and paper cups. All types of paper in form of woven materials in the form of rolls, sheets, napkins, wipes and paper towells | 675 MT/M |
| 32 | Original Cellulose Private Limited, Plot No. 48-3A, KIADB Industrial Area, Doddaballapura Taluk, Bengaluru Rural District | Doddaballapura Bengaluru Rural | All types Cellulose papers, paper plates and paper cups. All types of paper in form of woven materials in the form of rolls, sheets, napkins, wipes and paper towells | 325 MT/M |
| 33 | Visvak Jute Industry, Sy. No. 10/10, Kalaganoor Village, Kalaburagi Taluk & District | Kalaburagi | Jute Bags | 50 MT/M |